ಶಾಲೆಗಳನ್ನು) ಹೊರತು ಪಡಿಸಿ ವೃಥಾ ಅಧಿಕ ವೆಚ್ಚಕ್ಕೆ ಅವಕಾಶ ಕೊಡಬಾರದೆಂದು ಆದೇಶ ನೀಡಲಾಗಿದೆ.

ಆದ ಕಾರಣ ಈ ಇಲಾಖೆಯ ಪ್ರಸ್ತಾವನೆಗಳು ಹೊಸ ಹುದ್ದೆಗಳ ಸೃಷ್ಟಿ ಬಗ್ಗೆ ಇದ್ದ ಕಾರಣ ತಿರಸ್ಕರಿಸಲಾಯಿತು.

1991-92ನೇ ಸಾಲಿನಲ್ಲಿ ಪುತ್ತೂರು, ಕಾರ್ಕಳ ಮತ್ತು ಸ್ಥಳಿಗ್ರಾಮಗಳಲ್ಲಿ ಗ್ರಂಥಾಲಯ ಕಟ್ಟಡಗಳನ್ನು ಕಟ್ಟಲು ಮಂಜೂರಾತಿಯನ್ನು ನೀಡಲಾಗಿದೆ.

ಮೂಡಬಿದ್ರೆ ಸಬ್ ಸ್ಟೇಷನ್ ಕಾಮಗಾರಿ ಕೆಲಸ

3283 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದ್ರೆ ಸಬ್ ಸ್ಟೇಷನ್‌ನ ಕಾಮಗಾರಿ ಕೆಲಸವು ಯಾವ ಹಂತದಲ್ಲಿದೆ?

ಆ) 1991ಜೂನ್ ತಿಂಗಳ ಮೊದಲೇ ಉಪಕೇಂದ್ರವು ಪ್ರಾರಂಭವಾಗುವುದೆಂದು ಹೇಳಲಾಗಿದ್ದರೂ ಅದು ತಡವಾಗಲು ಕಾರಣವೇನು?

ಇ) ಅದರ ಕೆಲಸವು ಯಾವಾಗ ಪೂರ್ತಿಗೊಳ್ಳುವುದು?

ಈ) ಈ ಉಪಕೇಂದ್ರದ ನಿರ್ಮಾಣಕ್ಕೆ ಒಟ್ಟು ಎಷ್ಟು ಹಣ ವೆಚ್ಚವಾಗುವುದು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಮೂಡಬಿದ್ರಿ ಸಬ್ ಸ್ಟೇಷನ್‌ನ ಸಿವಿಲ್ ಕಾಮಗಾರಿಗಳ ಕೆಲಸ ಪ್ರಗತಿಯಲ್ಲಿದೆ.

ಆ) ಮುಂಗಾರಿನ ತಿಂಗಳುಗಳಲ್ಲಿ ತಲೆದೋರಿರುವ ಪ್ರತಿಕೂಲ ಹವಾಮಾನ ಮತ್ತು ಗಟ್ಟಿಮಣ್ಣಿನಿಂದ ಕೂಡಿದ ಈ ಸ್ಥಳವನ್ನು ಸಮತಟ್ಟು ಮಾಡುವುದಕ್ಕೆ ತೆಗೆದುಕೊಂಡ ಕಾಲದಿಂದ ಈ ನಿರ್ಮಾಣ ಕಾರ್ಯವಿಳಂಬವಾಗಿದೆ. ಅದಾಗ್ಯೂ ನಿರ್ಮಾಣ ಕಾರ್ಯವನ್ನು ಈಗ ಚುರುಕುಗೊಳಿಸಲಾಗುತ್ತಿದೆ.

ಇ) ಮುಂಬರುವ ತಿಂಗಳುಗಳಲ್ಲಿ ಬಾಕಿ ಉಳಿದಿರುವ ನಿರ್ಮಾಣ ಕಾರ್ಯಗಳನ್ನು ತ್ವರಿತಗೊಳಿಸಿ ಮಾರ್ಚ್ 92ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಈ) ಈ ವಿದ್ಯುತ್ ಉಪ ಕೇಂದ್ರದ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚ 92.73 ಲಕ್ಷ ರೂಪಾಯಿಗಳು.

ದ. ಕನ್ನಡ ಜಿಲ್ಲೆಯಲ್ಲಿನ ಸಾರ್ವಜನಿಕ ಗ್ರಂಥಾಲಯಗಳು

3392 - ಶ್ರೀ ಸೋಮಪ್ಪ ಸುವರ್ಣ(ಮೂಡಬಿದ್ರೆ) :ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಸಾರ್ವಜನಿಕ ಗ್ರಂಥಾಲಯಗಳಿಗೆ

ಆ) ಇತ್ತೀಚೆಗೆ ಈ ಗ್ರಂಥಾಲಯಗಳ ಬೆಳವಣಿಗೆ ಕುಂಠಿತವಾಗಲು ಕಾರಣವೇನು?

ಇ) ಪ್ರತಿ ಮಂಡಲದಲ್ಲಿಯೂ ಸರ್ಕಾರವು ಗ್ರಂಥಾಲಯ ತೆರೆಯುವ ಯೋಜನೆ ಹಾಕಿಕೊಂಡಿರುವುದೇ?

ಈ) ಗ್ರಂಥಾಲಯ ಸಿಬ್ಬಂದಿ ವರ್ಗದಲ್ಲಿ ತಮ್ಮ ಇಲಾಖೆಯಲ್ಲಿ ಬೆಳವಣಿಗೆ ಇಲ್ಲದೆ ತೊಂದರೆಯಾದ ಬಗ್ಗೆ ಮನವಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಈ ಇಲಾಖೆಯ ಅಭಿವೃದ್ಧಿ ಬಗ್ಗೆ ಸರ್ಕಾರ ಯಾವ ಯೋಜನೆ ಹಮ್ಮಿಕೊಂಡಿದೆ.

ಊ)ಮಂಗಳೂರು ನಗರ ಸಂಚಾರಿ ಗ್ರಂಥಾಲಯದ ಸೇವೆ ನಿಲ್ಲಿಸಲು ಕಾರಣವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 18 ಶಾಖಾ ಗ್ರಂಥಾಲಯಗಳು, 40 ಗ್ರಂಥವಿತರಣಾ ಕೇಂದ್ರಗಳು, 20 ಮಂಡಲ ಹಾಗೂ ಒಂದು ಸಂಚಾರಿ ಗ್ರಂಥಾಲಯಗಳಿವೆ.

ಆ) ಕುಂಠಿತವಾಗಿಲ್ಲ.

ಇ) ಹೌದು.

ಈ) ಹೌದು

ಉ) ಈ ಕೆಳಗೆ ಕಾಣಿಸಿದ ಯೋಜನೆಗಳನ್ನು ಇಲಾಖೆಯ ಅಭಿವೃದ್ಧಿಗೋಸ್ಕರ ಸರ್ಕಾರ ಹಮ್ಮಿಕೊಂಡಿದೆ.

(1) ಇಲಾಖೆಯ ಪುನರ್‌ರಚನೆ ಹಾಗೂ ಕೇಂದ್ರ ಕಛೇರಿಯಲ್ಲಿ ಹೆಚ್ಚುವರಿ ಸಿಬ್ಬಂದಿಯನ್ನು ಸೃಷ್ಟಿ ಮಾಡುವುದು.

(2) ವಿಭಾಗ ಮಟ್ಟದಲ್ಲಿ ವಿಭಾಗೀಯ ಕಛೇರಿಗಳನ್ನು ತೆರೆಯುವುದು.

(3)ನಗರ ಕೆಂದ್ರ ಗ್ರಂಥಾಲಯ ಬೆಂಗಳೂರನ್ನು ಐದು ವಿಭಾಗಗಳಾಗಿ ವಿಂಗಡಿಸುವುದು.

(4) ಕಾರ್ಯನಿರ್ವಹಣೆ ಮತ್ತು ಮೌಲ್ಯ ಮಾಪನ.

ಊ) ಮಂಗಳೂರು ನಗರ ಸಂಚಾರಿ ಗ್ರಂಥಾಲಯ ವಾಹನ ಚಾಲಕರು ವೈದ್ಯಕೀಯ ಕಾರಣಗಳಿಂದ ವಾಹನ ಚಾಲನೆ ಮಾಡಲು ಅಸಮರ್ಥರಾಗಿದ್ದು, ಸಂಚಾರಿ ಗ್ರಂಥಾಲಯ ಸೇವೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ.

ಶಿವಮೊಗ್ಗ ಬಿ. ಎಡ್. ಕಾಲೇಜು ಪ್ರಾರಂಭಿಸುವುದು

3458 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಬಿ. ಎಡ್. ಕಾಲೇಜುಗಳು ಎಷ್ಟು? (ಜಿಲ್ಲಾವಾರು ಪಟ್ಟಿ ಕೊಡಿರಿ)

ಆ) ಶಿವಮೊಗ್ಗ ಜಿಲ್ಲೆಗೆ ತುಂಬಾ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ವಿದ್ಯಾರ್ಥಿಗಳ ಬಹು ಬೇಡಿಕೆ ಇರುವುದರಿಂದ ಶಿವಮೊಗ್ಗ ಜಿಲ್ಲೆಗೆ ಒಂದು ಬಿ.ಎಡ್. ಕಾಲೇಜು ಮಂಜೂರು ಮಾಡಲಾಗುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) 63 (ವಿವರ ಅನುಬಂಧದಲ್ಲಿ)

ಆ) ಇಲ್ಲ.

ಇ) ಇಲ್ಲ.